# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| 1. ಮಾನ್ಯ ಸದಸ್ಯರ ಹೆಸರು | : | ಶ್ರೀ ಎನ್.ರವಿಕುಮಾರ್ |
| 2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 239 |
| 3. ಉತ್ತರಿಸುವ ದಿನಾಂಕ | : | 02.02.2021 |
| 4. ಉತ್ತರಿಸುವ ಸಚಿವರು | : | ಮಾನ್ಯ ಸಹಕಾರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ ಮೂರು ವರ್ಷಗಳಲ್ಲಿ ಸಹಕಾರಿ ಕಾನೂನಿನ ಅನ್ವಯ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಎಷ್ಟು ಬಹು ಮಹಡಿ ಕಟ್ಟಡಗಳ ಮಾಲೀಕರ ಸಂಘಗಳ ನೋಂದಣಿಯಾಗಿದೆ. (ವಿಭಾಗವಾರು ಮಾಹಿತಿ ನೀಡುವುದು) (Flat Owners Association) | ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರಡಿ ಬಹುಮಹಡಿ ಕಟ್ಟಡಗಳ ಮಾಲೀಕರ ಸಹಕಾರ ಸಂಘಗಳು ಬೆಂಗಳೂರು ನಗರ ವ್ಯಾಪ್ತಿಯಲ್ಲಿ ನೋಂದಣಿಯಾಗಿರುವುದಿಲ್ಲ. |
| (ಆ) | ಬಹು ಮಹಡಿ ವಸತಿ ಕಟ್ಟಡಗಳ ಮಾಲೀಕರ ಸಂಘಗಳು ಸಹಕಾರಿ ಕಾಯ್ದೆಯ ಯಾವ ಕಲಂಗಳ ಅನ್ವಯ ನೋಂದಣಿಯಾಗಿದೆ; (ಸದರಿ ಕಾನೂನಿನ ಕಲಂಗಳ ಪ್ರತಿಯನ್ನು ಒದಗಿಸುವುದು) | ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರನ್ವಯ ಬಹುಮಹಡಿ ವಸತಿ ಕಟ್ಟಡಗಳ ಮಾಲೀಕರ ಸಂಘಗಳು ನೋಂದಣಿಯಾಗಿರುವುದಿಲ್ಲ. |
| (ಇ) | ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಬಹು ಮಹಡಿ ವಸತಿ ಮಾಲೀಕರ ಸಂಘಗಳನ್ನು ಸಹಕಾರಿ ಕಾಯ್ದೆಯ ಅನ್ವಯ ನೋಂದಣಿ ಮಾಡಬಾರದೆಂದು ಆದೇಶ ನೀಡಿದೆಯೇ; ಸದರಿ ನ್ಯಾಯಾಲಯದ ಆದೇಶದ ಪ್ರತಿಯನ್ನು ನೀಡುವುದು. | ಗೌ. ಉಚ್ಚ ನ್ಯಾಯಾಲಯವು ಬಹುಮಹಡಿ ವಸತಿ ಮಾಲೀಕರ ಸಂಘಗಳನ್ನು ಸಹಕಾರಿ ಕಾಯ್ದೆಯನ್ವಯ ನೋಂದಣಿ ಮಾಡಬಾರದಾಗಿ ನಿರ್ದಿಷ್ಟವಾದ ಆದೇಶ ನೀಡಿರುವುದಿಲ್ಲ. |
| (ಈ) | ಮಾನ್ಯ ನ್ಯಾಯಾಲಯವು ಬಹು ಮಹಡಿ ವಸತಿ ಕಟ್ಟಡಗಳ ಮಾಲೀಕರ ಸಂಘಗಳನ್ನು ಸಹಕಾರಿ ಕಾಯ್ದೆಯ ಅನ್ವಯ ನೋಂದಣಿ ಮಾಡಬಾರದೆಂದು ಆದೇಶ ನೀಡಿದಲ್ಲಿ ಈಗಾಗಲೇ ನೋಂದಣಿಯಾಗಿರುವ ಬಹು ಮಹಡಿ ವಸತಿ ಕಟ್ಟಡಗಳ ಮಾಲೀಕರ ಸಂಘಗಳ ನೋಂದಣಿಯು ರದ್ದಾಗುವುದೇ; ಈ ಕುರಿತು ಸರ್ಕಾರದ ನಿಲುವೇನು? | ಗೌ. ಉಚ್ಚ ನ್ಯಾಯಾಲಯವು ಬಹು ಮಹಡಿ ವಸತಿ ಕಟ್ಟಡಗಳ ಮಾಲೀಕರ ಸಂಘಗಳನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಅನ್ವಯ ನೋಂದಣಿ ಮಾಡಬಾರದೆಂದು ಆದೇಶ ನೀಡಿರದ ಕಾರಣ ಕ್ರಮವಿರುವುದಿಲ್ಲ. |

**ಸಿಒ 10 ಸಿಎಸ್‌ಆರ್ 2021**

**(ಎಸ್.ಟಿ.ಸೋಮಶೇಖರ್)**
ಸಹಕಾರ ಸಚಿವರು